ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

(15)

ಶಾಖೆ / ವಿಷಯ : DEPARTMENT / SUBJECT: ಆರ್ಥಿಕ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ     ದಿನಾಂಕ : DATE : 21/1/2

# ನಾವೀನ್ಯತಾ ಸೂಚ್ಯಂಕದಲ್ಲಿ ಕರ್ನಾಟಕ ನಂ.1

ನವದೆಹಲಿ: ನೀತಿ ಆಯೋಗದ ನಾವೀನ್ಯತಾ ಸೂಚ್ಯಂಕದಲ್ಲಿ ಕರ್ನಾಟಕಕ್ಕೆ ನಂಬರ್ ಒನ್ ಸ್ಥಾನ!

ಹೌದು, ಬುಧವಾರ ನೀತಿ ಆಯೋಗದ ಉಪಾಧ್ಯಕ್ಷ ರಾಜೀವ್ ಕುಮಾರ್ ಮತ್ತು ಸಿಇಒ ಅಮಿತಾಭ್ ಕಾಂತ್ ಅವರು ದೇಶದ ರಾಜ್ಯಗಳ ಇನ್ನೋವೇಶನ್ ಇಂಡೆಕ್ಸ್ ಅನ್ನು ಬಿಡುಗಡೆ ಮಾಡಿದ್ದು ದೊಡ್ಡ ರಾಜ್ಯಗಳ ಸಾಲಿನಲ್ಲಿ ಕರ್ನಾಟಕ ನಂಬರ್ ಒನ್ ಸ್ಥಾನ ಗಳಿಸಿಕೊಂಡಿದೆ. ವಿಶೇಷವೆಂದರೆ ಸತತ ಎರಡನೇ ಬಾರಿಗೆ ರಾಜ್ಯ ನಂ.1 ಸ್ಥಾನ ಗಳಿಸಿಕೊಂಡಿದೆ.

- **ನೀತಿ ಆಯೋಗದಿಂದ ಇನ್ನೋವೇಶನ್ ಸೂಚ್ಯಂಕ ವರದಿ ಬಿಡುಗಡೆ**
- **ಮಹಾರಾಷ್ಟ್ರಕ್ಕೆ 2ನೇ, ತಮಿಳುನಾಡಿಗೆ 3ನೇ ಸ್ಥಾನ**

ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ಮತ್ತು ಕೇರಳ ರಾಜ್ಯಗಳು ನಂತರದ ಸ್ಥಾನ ಪಡೆದಿವೆ. ಜಾರ್ಖಂಡ್, ಛತ್ತೀಸ್‌ಗಡ ಮತ್ತು ಬಿಹಾರ ರಾಜ್ಯಗಳು ಕಡೆಯ ಸ್ಥಾನ ಗಳಿಸಿಕೊಂಡಿವೆ ಎಂದು ನೀತಿ ಆಯೋಗ ಹೇಳಿದೆ.

17 ಪ್ರಮುಖ ರಾಜ್ಯಗಳು, 10 ಈಶಾನ್ಯ ಮತ್ತು ಬೆಟ್ಟಗುಡ್ಡ ಸಾಲಿನ ರಾಜ್ಯಗಳು ಹಾಗೂ 9 ನಗರ ಮತ್ತು ಕೇಂದ್ರಾಡಳಿತ ಪ್ರದೇಶಗಳು ಎಂದು ವಿಂಗಡಿಸಿ ಈ ಸೂಚ್ಯಂಕ ನೀಡಲಾಗಿದೆ. 36 ಅಂಶಗಳನ್ನು ಗಮನಿಸಿ ರ್‍ಯಾಂಕಿಂಗ್ ನೀಡಲಾಗಿದೆ.

**ಕರ್ನಾಟಕಕ್ಕೆ ಸಿಕ್ಕಿದ್ದು ಹೇಗೆ?:** ಪ್ರಮುಖ ರಾಜ್ಯಗಳ ಲೆಕ್ಕಾಚಾರದಲ್ಲಿ ಕನಿಷ್ಠ 25.35 ಅಂದಾಜು ಅಂಕ ಗಳಿಸಿಕೊಂಡಿರಬೇಕು. ಇಲ್ಲಿ ಕರ್ನಾಟಕ 42.5 ಅಂಕಗಳನ್ನು ಗಳಿಸುವ ಮೂಲಕ ಮೊದಲ ಸ್ಥಾನ ಗಳಿಸಿಕೊಂಡಿತು. ಉತ್ತಮ ಬಂಡವಾಳ ಒಪ್ಪಂದಗಳು, ನೋಂದಾಯಿತ ಜಿಐಗಳು ಮತ್ತು ಐಸಿಟಿಗಳ ರಫ್ತು ಹೆಚ್ಚಳವೇ ಇದಕ್ಕೆ ಪ್ರಮುಖ ಕಾರಣ. ಅಷ್ಟೇ ಅಲ್ಲ ಕರ್ನಾಟಕಕ್ಕೆ ಹರಿದು ಬಂದ ವಿದೇಶಿ ಬಂಡವಾಳ ಕೂಡ ರಾಜ್ಯದ ನಾವೀನ್ಯತಾ ಸಾಮರ್ಥ್ಯವನ್ನು ಹೆಚ್ಚಳ ಮಾಡಿದೆ.

ಹಾಗೆಯೇ ಉದ್ಯಮ ಶುರು ಮಾಡಿದ ವಿಚಾರದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ಇನ್ನು ಪ್ರದರ್ಶನದ ವಿಚಾರದಲ್ಲಿ ಮೊದಲ ಸ್ಥಾನ, ಮಾನವ ಸಂಪನ್ಮೂಲ ವಿಚಾರದಲ್ಲಿ 3ನೇ ಸ್ಥಾನ, ಹೂಡಿಕೆ ವಿಚಾರದಲ್ಲಿ ಮೊದಲ ಸ್ಥಾನ, ಕೌಶಲ್ಯ ಕಾರ್ಮಿಕರ ವಿಚಾರದಲ್ಲಿ 2ನೇ ಸ್ಥಾನ, ವ್ಯಾಪಾರ ವಾತಾವರಣ ವಿಚಾರದಲ್ಲಿ 8ನೇ ಸ್ಥಾನ, ಸುರಕ್ಷತೆ ಮತ್ತು ಕಾನೂನು ವಾತಾವರಣದಲ್ಲಿ 16ನೇ ಸ್ಥಾನ ಪಡೆದಿದೆ.



**ಯಾರಿಗೆ ಎಷ್ಟು ಅಂಕ?**

**42.50** ಕರ್ನಾಟಕ
**38.03** ಮಹಾರಾಷ್ಟ್ರ
**37.91** ತಮಿಳುನಾಡು
**33.23** ತೆಲಂಗಾಣ
**30.58** ಕೇರಳ

**ರಾಜ್ಯಕ್ಕೆ ಎಲ್ಲಿ ಎಷ್ಟು ಅಂಕ?**

**54.27** ಮಾನವ ಸಂಪನ್ಮೂಲ
**33.01** ಹೂಡಿಕೆ
**22.58** ಕೌಶಲ್ಯ ಕಾರ್ಮಿಕರು
**24.43** ಉದ್ಯಮ ವಾತಾವರಣ
**28.13** ಜ್ಞಾನದ ಫಲಿತಾಂಶ
**72.26** ಜ್ಞಾನ ಪ್ರಸರಣ
**39.75** ಸುರಕ್ಷತೆ ಮತ್ತು ಕಾನೂನು

**ರಾಜ್ಯವು ಸತತ 2ನೇ ಬಾರಿಗೆ ನಾವೀನ್ಯತಾ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಸೂಚ್ಯಂಕವು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಾವೀನ್ಯತೆಯನ್ನು ನಿರ್ದೇಶಿಸುವ ವಿವಿಧ ಅಂಶಗಳ ವಿಶ್ಲೇಷಣೆಯನ್ನು ಒದಗಿಸುತ್ತದೆ. ಇದು ಉದ್ದಿಮೆಗಳಿಗೆ ಹೂಡಿಕೆಯನ್ನು ಆಕರ್ಷಿಸಲು ನೆರವಾಗುತ್ತದೆ.**

• ಡಾ.ಸಿ.ಎನ್.ಅಶ್ವತ್ಥನಾರಾಯಣ, ಮಾಹಿತಿ ಮತ್ತು ತಂತ್ರಜ್ಞಾನ ಸಚಿವ